RNU AIR DHARWAD

DECEMBER 13, 2024

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ, 21 ರಿಂದ 23ರ ವರೆಗೆ, ತೋಟಗಾರಿಕೆ ಮೇಳ.

- ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ, 27 ಹಾಗೂ 28 ರಂದು, ರಾಷ್ಟ್ರೀಯ ಅಗ್ರಿ ಸ್ಟಾರ್ಟ್‌ಅಪ್ ಎಕ್ಸಪೋ.
- 7ನೇ ಆವೃತ್ತಿಯ, ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್; ಹಾರ್ಡ್‌ವೇರ್ ಸ್ಪರ್ಧಾ ಆವೃತ್ತಿಗೆ ಚಾಲನೆ.
- ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲೂಕಿನಲ್ಲಿ, ನವ ಶಿಲಾಯುಗದ, 'ಡೋಲೆರೈಟ್ ಕಲ್ಲಿನ ಉಂಗುರ' ಪತ್ತೆ.

<><><>

ಈಗ ವಾರ್ತೆಗಳ ವಿವರ

<><><>

ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯ, 'ಆರ್ಥಿಕತೆ ಹಾಗೂ ಪೌಷ್ಟಿಕತೆಗಾಗಿ ತೋಟಗಾರಿಕೆ' ಎಂಬ ಧ್ಯೇಯದಡಿ, ಇದೇ 21 ರಿಂದ 23ರ ವರೆಗೆ, ತೋಟಗಾರಿಕೆ ಮೇಳ ಆಯೋಜಿಸಲಿದೆ ಎಂದು, ಉಪ ಕುಲಪತಿ ವಿಷ್ಣುವರ್ಧನ ತಿಳಿಸಿದ್ದಾರೆ. ಬಾಗಲಕೋಟೆಯ ತೋಟಗಾರಿಕೆ ವಿಸ್ತರಣಾ ನಿರ್ದೇಶನಾಲಯದಲ್ಲಿ, ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 24 ಜಿಲ್ಲೆಗಳಿಂದ ಗುರುತಿಸಲಾದ, ಸಾಧಕ ಕೃಷಿಕ ಫಲಶ್ರೇಷ್ಠರನ್ನು, ಗೌರವಿಸಲಾಗುವುದು ಎಂದರು.

ಸುಗಂಧ ದ್ರವ್ಯ ಬೆಳೆಗಳು ಹಾಗೂ ಡಿಜಿಟಲ್ ತೋಟಗಾರಿಕೆ ತಂತ್ರಜ್ಞಾನಗಳ ಸಮುಚ್ಚಯ ಮೇಳದ ವಿಶೇಷ ಆಕರ್ಷಣೆಯಾಗಲಿದ್ದು, ಸ್ಮಾರ್ಟ್ ಫೋನ್ ಬಳಸಿ, ಕ್ಯೂ.ಆರ್.ಕೋಡ್ ಸ್ಕ್ಯಾನ್ ಮೂಲಕ, ಮೇಳಕ್ಕೆ ಭೇಟಿ ನೀಡುವವರು ಮಾಹಿತಿ ಪಡೆಯಬಹುದು ಎಂದು, ಹೇಳಿದರು.

<><><>

ಧಾರವಾಡ ಕೃಷಿ ವಿಶ್ವವಿದ್ಯಾಲಯ, ಈ ತಿಂಗಳ 27 ಹಾಗೂ 28 ರಂದು, ಎರಡು ದಿನಗಳ, ರಾಷ್ಟ್ರೀಯ ಅಗ್ರಿ ಸ್ಟಾರ್ಟ್ ಅಪ್ ಎಕ್ಸಪೋ, ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ ಆಯೋಜಿಸಿದೆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ 'ರಫ್ತಾರ್', ಕೇಂದ್ರದ ಕೃಷಿ ಹಾಗೂ ರೈತರ ಕಲ್ಯಾಣ ಸಚಿವಾಲಯದ, ಜ್ಞಾನ ಪಾಲುದಾರ, ಕೃಷಿಕ್ ನವೋದ್ಯಮ್ ಪೋಷಣ್ ಕೇಂದ್ರದ ಸಹಭಾಗಿತ್ವದಲ್ಲಿ, ಸ್ಟಾರ್ಟ್ ಅಪ್ ಮೇಳ, ನಡೆಯಲಿದೆ. ಸ್ಟಾರ್ಟ್ ಅಪ್ ಮೇಳವನ್ನು, ಕೇಂದ್ರ ಕೃಷಿ ಮತ್ತು ರೈತರ ಅಭಿವೃದ್ಧಿ ಸಚಿವ ಶಿವರಾಜಸಿಂಗ್ ಚವ್ಹಾಣ ಉದ್ಘಾಟಿಸಲಿದ್ದಾರೆ. 150 ರಿಂದ 200 ಕೃಷಿ ಸ್ಟಾರ್ಟ್ ಅಪ್‌ಗಳು ಭಾಗವಹಿಸಲಿವೆ. ಕೃಷಿಗೆ ಸಂಬಂಧಿಸಿದ ನಾವಿನ್ಯತೆಗಳ ಪ್ರದರ್ಶನ ಮತ್ತು ಮಾರಾಟ ಹಾಗೂ ವ್ಯವಹಾರ ಒಪ್ಪಂದಕ್ಕೆ, ಅವಕಾಶ ಕಲ್ಪಿಸಲಾಗಿದೆ. ಕೃಷಿ ಸ್ಟಾರ್ಟ್ ಅಪ್ ಪ್ರಾರಂಭಿಸಲು ಹಾಗೂ ಉದ್ಯಮಶೀಲತಾ ಮಾರ್ಗದರ್ಶನ ಸಹ ಲಭ್ಯವಿರಲಿದೆ. krishik-abiuasd.org ಜಾಲತಾಣದಲ್ಲಿ ಹೆಸರು ನೊಂದಾಯಿಸಬಹುದು.

<><><>

ರಾಜ್ಯದ ಸಾವಯವ ಹಾಗೂ ಸಿರಿಧಾನ್ಯಗಳಿಗೆ, ಮಾರುಕಟ್ಟೆ ಕಲ್ಪಿಸುವ ಹಾಗೂ ಗ್ರಾಹಕರಲ್ಲಿ ಜಾಗ್ರತಿ ಮೂಡಿಸುವ ಉದ್ದೇಶದಿಂದ, ಬೆಂಗಳೂರಿನ ಅರಮನೆ ಮೈದಾನದ, ತ್ರಿಪುರವಾಸಿನಿಯಲ್ಲಿ, ಜನವರಿ 23 ರಿಂದ 25ರ ವರೆಗೆ, "ಸಿರಿಧಾನ್ಯ ಮತ್ತು ಸಾವಯವ ಅಂತಾರಾಷ್ಟ್ರೀಯ ವಾಣಿಜ್ಯ ಮೇಳ–2025"ನ್ನು ಆಯೋಜಿಸಲಾಗಿದೆ. ಈ ಮೇಳದ ಪೂರ್ವಭಾವಿ ಕಾರ್ಯಕ್ರಮಕ್ಕೆ, ಇಂದು ಮಧ್ಯಾಹ್ನ 1.30ಕ್ಕೆ ಬೆಳಗಾವಿಯ ಸುವರ್ಣಸೌಧದ ಸಮ್ಮೇಳನ ಸಭಾಂಗಣದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ.

<><><>

ವಿಶ್ವ ಸಂಸ್ಥೆಯ, ಸುಸ್ಥಿರ ಅಭಿವೃದ್ಧಿಯ 19 ಮಾನದಂಡಗಳಡಿ, ಕೇಂದ್ರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವಾಲಯ, ಜಿಲ್ಲಾ ಹಾಗೂ ಗ್ರಾಮ ಪಂಚಾಯ್ತಿಗಳಿಗೆ ನಿಗದಿ ಪಡಿಸಿದ ಗುರಿಗಳನ್ವಯ, ಗಮನಾರ್ಹ ಸಾಧನೆ ಗೈಯ್ದು, ಉಡುಪಿ ಜಿಲ್ಲಾ ಪಂಚಾಯ್ತಿಗೆ, ರಾಷ್ಟ್ರ ಮಟ್ಟದಲ್ಲಿ ತೃತೀಯ ಸ್ಥಾನ ಹಾಗೂ 2 ಕೋಟಿ ರೂಪಾಯಿ ನಗದು ಪುರಸ್ಕಾರ ಲಭಿಸಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ, ಹೊಸ ದಿಲ್ಲಿಯ ವಿಜ್ಞಾನ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ, ಪುರಸ್ಕಾರ ಪಡೆದ, ಉಡುಪಿ ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಪ್ರತೀಕ ಬಾಯಲ್, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಸಿ.ಇ.ಓ. ಪ್ರತೀಕ ಬಾಯಲ್ 60 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕೊಡಗು ಜಿಲ್ಲೆ, ಮಡಿಕೇರಿ ತಾಲೂಕಿನ, ಗಾಳಿಬೀಡು ಗ್ರಾಮ ಪಂಚಾಯಿತಿ, ದೇಶಕ್ಕೆ ಪ್ರಥಮ ಸ್ಥಾನ ಪಡೆದು, ದೀನ್ ದಯಾಳ್ ಉಪಾಧ್ಯಾಯ, ಪಂಚಾಯತ್ ಸತತ ವಿಕಾಸ ಪುರಸ್ಕಾರಕ್ಕೆ, ಭಾಜನವಾಗಿದೆ. 1 ಕೋಟಿ ರೂಪಾಯಿ ನಗದು ಬಹುಮಾನವನ್ನು ರಾಷ್ಟ್ರಪತಿಯವರು ಜಿಲ್ಲಾಡಳಿತಕ್ಕೆ ಪ್ರದಾನ ಮಾಡಿ, ಗೌರವಿಸಿದ್ದಾರೆ. ಗಾಳಿಬೀಡು ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಶಶಿ ಕಿರಣ್ ಪ್ರದೇಶ ಸಮಾಚಾರಕ್ಕಾಗಿ ಹರ್ಷ ವ್ಯಕ್ತ ಪಡಿಸಿದ್ದಾರೆ.

<><><>

ಪಿ.ಡಿ.ಓ. ಶಶಿ ಕಿರಣ್ ಧ್ವನಿ 44 ಸೆಕೆಂದುಗಳು

<><><>

ಜಗತ್ತಿನ ನೈಜ ಹಾಗೂ ಪ್ರಾಯೋಗಿಕ ಸಮಸ್ಯೆಗಳನ್ನು ನಾವಿನ್ಯತೆ ಮೂಲಕ ಎದುರಿಸಲು, ತಾಂತ್ರಿಕ ಮತ್ತು ಅಭಿಯಾಂತ್ರಿಕ ವಿದ್ಯಾರ್ಥಿಗಳನ್ನು ಅಣಿಗೊಳಿಸಲು, 7ನೇ ಆವೃತ್ತಿಯ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ ಕಾರ್ಯಕ್ರಮ, ದೇಶಾದ್ಯಂತ ಪ್ರಗತಿಯಲ್ಲಿದೆ. ಸಾಫ್ಟ್‌ವೇರ್ ಆವೃತ್ತಿಯ ಗ್ರ್ಯಾಂಡ್ ಫಿನಾಲೆ, ಸತತ 36 ಗಂಟೆಗಳ ಕಾಲ ನಡೆದಿದ್ದು, ಹಾರ್ಡ್‌ವೇರ್ ಆವೃತ್ತಿ 5 ದಿನಗಳ ಕಾಲ ನಡೆದು, ನಾಡಿದ್ದು 15 ರಂದು ಮುಕ್ತಾಯವಾಗಲಿದೆ. ಹುಬ್ಬಳ್ಳಿಯ ಕೆ.ಎಲ್.ಇ. ಬಿ.ವ್ಹಿ. ಭೂಮರಡ್ಡಿ ತಾಂತ್ರಿಕ ಮತ್ತು ಅಭಿಯಾಂತ್ರಿಕ ಕಾಲೇಜು, ಬೆಳಗಾವಿಯ ಶ್ರೀ ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯ ಸೇರಿದಂತೆ, ರಾಜ್ಯದ 9 ಶಿಕ್ಷಣ ಸಂಸ್ಥೆಗಳು, ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್‌ನ ಗ್ರ್ಯಾಂಡ್ ಫಿನಾಲೆ ಆಯೋಜಿಸಿವೆ.

<><><>

ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲೂಕಿನ, ಕೋಡೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯ, ಕರಿಗೆರಸು ಗ್ರಾಮದ ಹಿಂಡ್ಲೆಮನೆಯಲ್ಲಿ, ಅಂದಾಜು 3 ಸಾವಿರದ 500 ವರ್ಷಗಳಷ್ಟು ಹಳೆಯದು ಎನ್ನಲಾದ, ನವ ಶಿಲಾಯುಗದ, 'ಡೋಲೆರೈಟ್ ಕಲ್ಲಿನ ಉಂಗುರ' ಪತ್ತೆಯಾಗಿದೆ. ಹಿಂಡ್ಲೆಮನೆಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ, ಸಹ ಶಿಕ್ಷಕ ಹನುಮಂತಪ್ಪ ಅವರು ಈ ಉಂಗುರವನ್ನು ಪತ್ತೆ ಮಾಡಿದ್ದಾರೆ. ಹೊಸನಗರ ಪಟ್ಟಣದಿಂದ 20 ಕಿಲೋ ಮೀಟರ್ ಮತ್ತು ಶಿವಮೊಗ್ಗ ಜಿಲ್ಲಾ ಕೇಂದ್ರದಿಂದ 55 ಕಿಲೋ ಮೀಟರ್ ದೂರದಲ್ಲಿದೆ.

<><><>

ಇತಿಹಾಸ ಸಂಶೋಧಕ ಅಜಯ್ ಶರ್ಮ ಈ ಕುರಿತು ಮಾಹಿತಿ ನೀಡಿ, ಕಬ್ಬಿಣದ ಆವಿಷ್ಕಾರಕ್ಕೂ ಮೊದಲು ತಯಾರಿಸಲಾದ, ಈ ಕಲ್ಲಿನ ಉಂಗುರವನ್ನು ಅಗೆಯಲು ಮತ್ತು ಮೀನು ಹಿಡಿಯಲು ಬಲೆಗಳನ್ನು ನೀರಿನಲ್ಲಿ ಮುಳುಗಿಸಲು ಒಂದು ತೂಕವಾಗಿ ಮತ್ತು ಮಣಿಗಳಿಗೆ ಹೊಳಪು ಕೊಡಲು ಆಧಾರವಾಗಿ ಬಳಸಲಾಗುತ್ತಿತ್ತು, ಎಂದಿದ್ದಾರೆ.

<><><>

ಕೆಲ ದಿನಗಳ ಹಿಂದೆ ಚಿಕ್ಕಮಗಳೂರು ಜಿಲ್ಲೆ, ಕೊಪ್ಪ ತಾಲೂಕಿನ, ಮೇಗುಂದ ಹೋಬಳಿ ವ್ಯಾಪ್ತಿಯ, ಅಗಳಗಂಡಿ ಗ್ರಾಮದ ನವಿಲರೆಕಲ್ಲು ಎಂಬಲ್ಲಿ, ಅಂದಾಜು 6 ಸಾವಿರ ವರ್ಷಗಳ ಹಿಂದಿನ, ಕಲ್ಲು ಪತ್ತೆಯಾಗಿದೆ.

<><><>

ಆಕಾಶವಾಣಿ ಧಾರವಾಡ ಕೇಂದ್ರದ, ಅಮೃತ ಮಹೋತ್ಸವ ಸಂಭ್ರಮಾಚರಣೆ ಹಿನ್ನೆಲೆ, ಶಾಲ್ಮಲಾ ಸಭಾ ಭವನದಲ್ಲಿ, 'ಸುಬೋಧ ಸಮಾಲೋಚನೆ' ಶತಕದ ಸಂಭ್ರಮ, ವಿಶಿಷ್ಠ ಸಮಾರಂಭ ಜರುಗಿತು. ಮಕ್ಕಳಲ್ಲಿ ಕಲಿಕಾ ತೊಂದರೆಗಳನ್ನು ನಿಭಾಯಿಸುವ ವಿವಿಧ ಆಯಾಮಗಳ ಕುರಿತು, ಸಮಾಲೋಚಕ ಡಾಕ್ಟರ್ ಗುರುರಾಜ ಪಾಟೀಲ ಹಾಗೂ ಇತರರು ಅವರೊಡನೆ ನಡೆಸುವ ಸಂದರ್ಶನದ, ವಿಶೇಷ ಕಾರ್ಯಕ್ರಮ ಸರಣಿ, ಸುಬೋಧ ಸಮಾಲೋಚನೆಯ, 113 ಕಂತುಗಳು ಈ ವರೆಗೆ, ಪ್ರಸಾರವಾಗಿವೆ. ಮುಖ್ಯ ಅತಿಥಿಯಾಗಿ, ಖ್ಯಾತ ಮನೋಆರೋಗ್ಯ ತಜ್ಞ, ವೈದ್ಯ ಆನಂದ ಪಾಂಡುರಂಗಿ, ಸಮಾಲೋಚಕ ಗುರುರಾಜ ಪಾಟೀಲ, ಆಕಾಶವಾಣಿ ಧಾರವಾಡದ, ಕಾರ್ಯಕ್ರಮ ಮುಖ್ಯಸ್ಥ ಶರಣಬಸವ ಚೋಳಿನ ಹಾಗೂ ಉಪ ಮಹಾನಿರ್ದೇಶಕ ಕೆ.ಅರುಣ ಪ್ರಭಾಕರ ಪಾಲ್ಗೊಂಡಿದ್ದರು.

<><><>

ಉತ್ತರಕನ್ನಡ ಜಿಲ್ಲೆ, ಮುರುಡೇಶ್ವರದಲ್ಲಿ ಸಮುದ್ರಕ್ಕಿಳಿದು ಸಾವಿಗೀಡಾದ, ಕೋಲಾರ ಜಿಲ್ಲೆ ಮುಳುಬಾಗಿಲು ತಾಲೂಕಿನ, ಎಂ.ಕೊತ್ತೂರು ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿನಿಯರಾದ, ಶ್ರವಂತಿ, ದೀಕ್ಷಾ ಜೆ., ಲಾವಣ್ಯಾ ಮತ್ತು ವಂದನಾ ಕುಟುಂಬದವರಿಗೆ, ಜಿಲ್ಲಾಧಿಕಾರಿ ಅಕ್ರಂ ಪಾಷಾ, ತಲಾ 5 ಲಕ್ಷ ರೂಪಾಯಿ ಚೆಕ್ ನೀಡಿ, ಸಾಂತ್ವನ ಹೇಳಿದರು.

<><><>

ಸ್ವಾತಂತ್ರ್ಯ ಹೋರಾಟಗಾರ, ವಿಧಾನಪರಿಷತ್ ಮಾಜಿ ಸದಸ್ಯ, ಕೇಶವರಾವ್ ನಿಟ್ಟೂರಕರ್ ಬೀದರ್ ನಗರದ ಖಾಸಗಿ ಆಸ್ಪತ್ರೆಯಲ್ಲಿ ವಿಧಿವಶರಾದರು. ಅವರಿಗೆ 102 ವರ್ಷ ವಯಸ್ಸಾಗಿತ್ತು. ಭಾಲ್ಕಿ ತಾಲೂಕಿನ ನಿಟ್ಟೂರ್ (ಬಿ) ಗ್ರಾಮದವರಾದ, ನಿಟ್ಟೂರಕರ್ ಐದು ದಶಕಗಳ ಕಾಲ ವಕೀಲಿ ವೃತ್ತಿ ಮಾಡಿದ್ದರು. 1958 ರಿಂದ 1960ರ ವರೆಗೆ ವಿಧಾನ ಪರಿಷತ್ ಉಪ ಸಭಾಪತಿಯಾಗಿ ಕೆಲಸ ನಿರ್ವಹಿಸಿದ್ದರು. ನಿನ್ನೆ ಸಂಜೆ ಭಾಲ್ಕಿಯಲ್ಲಿ ಸಕಲ ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ನಡೆಯಿತು.

<><><>

ಮಾಜಿ ಮುಖ್ಯಮಂತ್ರಿ, ಮುತ್ಸದ್ದಿ ಎಸ್.ನಿಜಲಿಂಗಪ್ಪ ಅವರ, ಚಿತ್ರದುರ್ಗದ ಮನೆಯನ್ನು, ರಾಷ್ಟ್ರೀಯ ಸ್ಮಾರಕವಾಗಿಸಲು, ರಾಜ್ಯ ಸರ್ಕಾರ ಖರೀದಿಸಿದೆ ಎಂದು, ಜಿಲ್ಲಾಧಿಕಾರಿ ಟಿ.ವೆಂಕಟೇಶ ತಿಳಿಸಿದ್ದಾರೆ. 4 ಕೋಟಿ 18 ಲಕ್ಷದ 49 ಸಾವಿರದ 16 ರೂಪಾಯಿಗಳನ್ನು, ಎಸ್.ನಿಜಲಿಂಗಪ್ಪನವರ ವಾರಸುದಾರರಿಗೆ ನೀಡಿ, ರಾಜ್ಯಪಾಲರ ಹೆಸರಿಗೆ ನೊಂದಾಯಿಸಿದ್ದಾಗಿ, ಹೇಳಿದ್ದಾರೆ.

<><><>

ಇಂದು ರಾಷ್ಟ್ರೀಯ ಪಿಟೀಲು ವಾದ್ಯ ದಿನಾಚರಣೆ. ಜಗತ್ತಿನಾದ್ಯಂತ ಪಾಶ್ಚಾತ್ಯ ಸಂಗೀತ ಹಾಗೂ ಭಾರತೀಯ ಶಾಸ್ತ್ರೀಯ ಸಂಗೀತ ಪ್ರಕಾರಗಳಲ್ಲಿ ಕೇವಲ 4 ತಂತಿಯ ಈ ವಾದ್ಯವನ್ನು ಅತೀ ಹೆಚ್ಚು ಬಳಸಲಾಗುತ್ತದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ‘ಡಿಜಿಟಲ್ ಅರೆಸ್ಟ್’ ವಂಚನೆ ಪ್ರಕರಣ; ಸಾಮಾಜಿಕ ಮಾಧ್ಯಮಗಳ ಮೂಲಕ, ಗೃಹ ಇಲಾಖೆಯಿಂದ, ಜನ ಜಾಗ್ರತಿ.
- ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ, 21 ರಿಂದ 23ರ ವರೆಗೆ, ತೋಟಗಾರಿಕೆ ಮೇಳ.
- ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ, 27 ಹಾಗೂ 28 ರಂದು, ರಾಷ್ಟ್ರೀಯ ಅಗ್ರಿ ಸ್ಟಾರ್ಟ್‌ಅಪ್ ಎಕ್ಸಪೋ.
- 7ನೇ ಆವೃತ್ತಿಯ, ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್; ಹಾರ್ಡ್‌ವೇರ್ ಸ್ಪರ್ಧಾ ಆವೃತ್ತಿಗೆ ಚಾಲನೆ.
- ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲೂಕಿನಲ್ಲಿ, ನವ ಶಿಲಾಯುಗದ, ‘ಡೋಲೆರೈಟ್ ಕಲ್ಲಿನ ಉಂಗುರ’ ಪತ್ತೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ